### ಆಲಿಕೆಯ ಬಗ್ಗೆ ಜಾಗ್ರತೆ

ಪ್ರತಿದಿನವೂ ಉಪಕರಣದ ಮೂಲಕ ಆಲಿಸಿ. ಧ್ವನಿ ತರಂಗಗಳ ನಿರಂತರತೆಯನ್ನು ಪರೀಕ್ಷಿಸುತ್ತಿರಿ. ಪ್ರತಿಧ್ವನಿ ಅಥವಾ ಸಿಳ್ಳೆಯ ಧ್ವನಿ ಬರುತ್ತಿದೆಯೇ ಎಂದು ಗಮನಿಸಿಕೊಳ್ಳಬೇಕು.



### ಶ್ರವಣ ಸಾಧನದ ಸ್ವಚ್ಛತೆ

ಕಿವಿಯ ಕಲ್ಮಶ, ಧೂಳು, ಮಣ್ಣಿನ ಕಣಗಳು ಉಪಕರಣದ ಯಾವುದೇ ಭಾಗದಲ್ಲೂ ಸಂಗ್ರಹವಾಗದಂತೆ ನೋಡಿಕೊಳ್ಳಬೇಕು . ಕನಿಷ್ಠ ೩-೪ ತಿಂಗಳಿಗೊಮ್ಮೆಯಾದರೂ ನಳಿಕೆಯನ್ನು ಬದಲಾಯಿಸಿಕೊಳ್ಳಿ .



### ಸುರಕ್ಷಿತ ಸ್ಥಳದಲ್ಲಿರಿಸಿ

ಸಾಧನವನ್ನು ಯಾವಾಗಲೂ ತೇವ (ಒದ್ದೆ) ಆಗದಂತೆ ಶುಷ್ಕವಾದ ವಾತಾವರಣದಲ್ಲಿ ತಂಪಾದ ಸ್ಥಳದಲ್ಲಿಯೇ (ಅಂದರೆ ನೇರವಾದ ಬಿಸಿಲು/ಉಷ್ಣತೆಯಿಂದ ದೂರ) ಇಡಿ.



### ಶ್ರವಣ ಸಾಧನವನ್ನು ತೆಗೆದಿಡುವುದು

ಸ್ನಾನ, ಈಜುವಿಕೆ, ನಿದ್ರೆಯ ಸಮಯದಲ್ಲಿ ಹಾಗೂ ಕೂದಲಿಗೆ ರಾಸಾಯನಿಕಗಳನ್ನು ಬಳಸುವಾಗ ನಿಮ್ಮ ಸಾಧನವನ್ನು ತೆಗೆದಿಡಲು ಮರೆಯದಿರಿ.



### ಬ್ಯಾಟರಿ ಬಗ್ಗೆ ಕಾಳಜಿ

ಶ್ರವಣ ಸಾಧನಕ್ಕೆ ಶಕ್ತಿ ಪೂರೈಸುವ ಬ್ಯಾಟರಿಯನ್ನು ಸರಿಯಾದ ಸಮಯಕ್ಕೆ ಬದಲಿಸುತ್ತಿರಬೇಕು.



### ಕಿವಿಯ ಸ್ವಚ್ಛತೆಯನ್ನು ಕಾಪಾಡಿಕೊಳ್ಳುವುದು

ಕಿವಿಯ ಗುಗ್ಗೆ, ಕಿವಿಯನ್ನು ಕಾಪಾಡುವುದರಲ್ಲಿ ಒಂದು ರೀತಿ ಸಹಕಾರಿಯಾದರೆ , ಅದರ ಪ್ರಮಾಣ ಜಾಸ್ತಿಯಾದಲ್ಲಿ ಅದು ಶ್ರವಣ ಸಾಧನವನ್ನು ತೀವ್ರವಾಗಿ ಹಾಳುಮಾಡುತ್ತದೆ. ಆದ್ದರಿಂದ, ಕಿವಿಯ ಗುಗ್ಗೆಯ ಪ್ರಮಾಣ ಅತಿಯಾಗಿ ಹೆಚ್ಚಾದಲ್ಲಿ , ಶ್ರವಣತಜ್ಞರನ್ನು ಆಗಾಗ ಭೇಟಿ ಮಾಡುವುದು ಉತ್ತಮ.



**ಈ ಕೆಳಗಿನ ಅಂಶಗಳನ್ನು ಖಾತ್ರಿ ಪಡಿಸಿಕೊಳ್ಳಿ.**

- ಬ್ಯಾಟರಿಯ ಕವಾಟವನ್ನು ಭದ್ರವಾಗಿ ಮುಚ್ಚಿರುವುದು.
- ಕಿವಿಯ ಕಲ್ಮಶವು ಶ್ರವಣ ಸಾಧನಕ್ಕೆ ಅಂಟದಿರುವುದು
- ತೇವದಿಂದ ರಕ್ಷಿಸಲ್ಪಡಲು ಶುಷ್ಕ ಕರಡಿಗೆಯನ್ನು ಬಳಸುವುದು.
- ಮಕ್ಕಳು ಹಾಗೂ ಸಾಕು ಪ್ರಾಣಿಗಳಿಂದ ದೂರ ಇರಿಸುವುದು.
- ಶ್ರವಣ ಸಾಧನವು ಸೂಕ್ಷ್ಮವಾಗಿರುವುದರಿಂದ ಬೀಳದಂತೆ ಎಚ್ಚರಿಕೆ ವಹಿಸುವುದು.
- ಯಾವುದೇ ವಿದ್ಯುತ್ ಉಪಕರಣಗಳಿಂದ ದೂರ ಇರಿಸುವುದು.
- ಎಲ್ಲಕ್ಕೂ ಮಿಗಿಲಾಗಿ ನಿಯಮಿತವಾಗಿ ಶ್ರವಣ ತಜ್ಞರನ್ನು ಭೇಟಿಯಾಗುವುದು.


*ಜೆಎಸ್ಎಸ್ ವಾಕ್ ಶ್ರವಣ ಸಂಸ್ಥೆ,*

*ತಪೋವನದ ಹತ್ತಿರ, ಶ್ರೀ ಶಿವರಾತ್ರೀಶ್ವರ ನಗರ, ಕೆಲಗೇರಿ*
*ಧಾರವಾಡ - 580007*

*ಫೋನ್ ಸಂಖ್ಯೆ : 0836-2770775/2776776*


*ಸಮಯ: ಸೋಮವಾರದಿಂದ ಶನಿವಾರದವರೆಗೆ*

*10am to 5pm*

***ಭೇಟಿ ನೀಡಿ :*** *http://jssishdharwad.org*

ಜೆಎಸ್ಎಸ್ ಮಹಾವಿದ್ಯಾಪೀಠ, ಮೈಸೂರು

# ಜೆಎಸ್ಎಸ್ ವಾಕ್ ಶ್ರವಣ ಸಂಸ್ಥೆ, ಧಾರವಾಡ

(ಭಾರತೀಯ ಪುನರ್ವಸತಿ ಪರಿಷತ್ತಿನ ಮಾನ್ಯತೆ
ಹಾಗೂ
ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡದಿಂದ
ಸಂಯೋಜನೆ ಪಡೆದಿರುವ ಸಂಸ್ಥೆ)

ಶ್ರೀ ಶಿವರಾತ್ರೀಶ್ವರ ನಗರ,
ಕೆಲಗೇರಿ, ಧಾರವಾಡ-೫೮೦೦೦೭

# ಶ್ರವಣ ಸಾಧನಗಳ ಸಂರಕ್ಷಣೆಯ ಕುರಿತು ಇರಬೇಕಾದ ಕಾಳಜಿ